**ಪತ್ರಿಕಾ ಪ್ರಕಟಣೆ**

## ತುಮಕೂರಿನ ತೋಟದ ಮನೆಯ ಅನಧಿಕೃತ ಪಾನ್ ಮಸಾಲ ಉತ್ಪಾದನಾ ಘಟಕದ ಮೇಲೆ ವಾಣಿಜ್ಯ ತೆರಿಗೆಗಳ ಇಲಾಖೆಯಿಂದ ದಾಳಿ

ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳು ತುಮಕೂರು ಹಾಗೂ ಚಿಕ್ಕಬಳ್ಳಾಪುರದಲ್ಲಿ ಅನಧಿಕೃತ ಪಾನ್ ಮಸಾಲ ಉತ್ಪಾದನಾ ಘಟಕಗಳ ಮೇಲೆ ದಾಳಿ ಮಾಡಿ ರೂ.21 ಲಕ್ಷ ದಂಡ ವಿಧಿಸಿರುತ್ತಾರೆ.

ಕೋವಿಡ್–19 ಲಾಕ್‌ಡೌನ್ ವೇಳೆಯಲ್ಲಿ ಕೆಲವು ವ್ಯಕ್ತಿಗಳು ಅನಧಿಕೃತ ಸ್ಥಳಗಳಿಂದ ಪಾನ್ ಮಸಾಲಾ ಹಾಗೂ ತಂಬಾಕು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಲಭಿಸಿದ ಖಚಿತ ಮಾಹಿತಿಯನ್ನು ಆಧರಿಸಿ ಶ್ರೀ ನಿತೇಶ್ ಪಾಟೀಲ್, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಇವರ ನೇತೃತ್ವದ ಅಧಿಕಾರಿಗಳ ತಂಡವು ದಿನಾಂಕ 05.06.2020ರ ಶುಕ್ರವಾರ ಮುಂಜಾನೆ ತುಮಕೂರಿನ 3 ಸ್ಥಳಗಳಲ್ಲಿ ಹಾಗೂ ಚಿಕ್ಕಬಳ್ಳಾಪುರದ 2 ಸ್ಥಳಗಳಲ್ಲಿ ದಾಳಿ ನಡೆಸಿತು. ದಾಳಿ ವೇಳೆ ತೋಟದ ಮನೆಗೆ ಹೊಂದಿಕೊಂಡಂತಿರುವ ಗೋದಾಮಿನಲ್ಲಿ ಪಾನ್ ಮಸಾಲ ಉತ್ಪಾದನೆಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಕಂಡು ಅಧಿಕಾರಿಗಳು ಬೆರಗಾದರು. ಶಿರಾದ ಬಳಿ ಒಂದು ಅನಧಿಕೃತ ಗೋದಾಮಿನಲ್ಲಿ 340 ಚೀಲ ಕಚ್ಚಾ ತಂಬಾಕನ್ನು ಸಂಗ್ರಹಿಸಲಾಗಿದ್ದು, ಸದರಿ ಗೋದಾಮಿಗೆ ಮುಂದಿನ ತನಿಖೆಗಾಗಿ ಬೀಗ ಮುದ್ರೆ ಹಾಕಲಾಗಿದೆ. ದಾಖಲೆಗಳನ್ನು ಹೊಂದದೆ ಶೇಖರಿಸಿದ್ದ ಸರಕುಗಳ ಮೇಲೆ ರೂ.21 ಲಕ್ಷ ತೆರಿಗೆ ಮತ್ತು ದಂಡ ವಿಧಿಸಿ, ಆ ಪೈಕಿ ರೂ.13 ಲಕ್ಷಗಳನ್ನು ಆ ದಿನವೇ ವಸೂಲು ಮಾಡಲಾಗಿದೆ. ಮುಂದಿನ ತನಿಖೆ ಪ್ರಗತಿಯಲ್ಲಿದೆ.





ವಾಣಿಜ್ಯ ತೆರಿಗೆಗಳ ಇಲಾಖೆಯು ಪಾನ್ ಮಸಾಲ ಹಾಗೂ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಸಾಗಾಣಿಕೆಯ ಮೇಲೆ ತೀವ್ರ ನಿಗಾ ವಹಿಸಿದ್ದು, ಜಿ.ಎಸ್.ಟಿ. ಕಾಯ್ದೆಯನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ತತ್ಸಂಬಂಧ, ಮಾಹಿತಿ ಇದ್ದಲ್ಲಿ ಮಾಹಿತಿದಾರರು ಜಾರಿ, ದಕ್ಷಿಣ ವಲಯದ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ: 080–25704970 ಮುಖಾಂತರ ಹಂಚಿಕೊಳ್ಳಬಹುದಾಗಿರುತ್ತದೆ.

(ಎಂ.ಎಸ್. ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು